2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ133/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ದೇವರಾಜು | ಪಿಡಬ್ಲೂ - 1 |
| ತಂದೆಯ ಹೆಸರು | - | ಭೈರಯ್ಯ | ಸಿಡಬ್ಲೂ - 4 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಕೂಲಿ ಕೆಲಸ | |
| ವಾಸ ಸ್ಥಳ | - | ಇಳೆಖಾನ್ | |

ದಿನಾಂಕಃ 16.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನನ್ನ ಸಂಬಂಧಿ. ಮೃತ ಹೇಮಲತಾ ಆರೋಪಿಯ ಹೆಂಡತಿ. ಚಾಸಾ.2 ಗೊತ್ತಿಲ್ಲ. ಸಹ ಪಂಚರಾದ ಚಾಸಾ.3 ಮತ್ತು 5 ಗೊತ್ತು.

2. ಈಗ್ಗೆ 3-4 ವರ್ಷಗಳ ಹಿಂದೆ ಹೇಮಲತಾಳನ್ನು ಹೊಟ್ಟೆ ನೋವಿನಿಂದಾಗಿ ಹಾಸನದ ಮಂಗಳಾ ಆಸ್ಪತ್ರೆಗೆ ದಾಖಲು ಮಾಡಿದ ವಿಚಾರ ತಿಳಿಯಿತು ನಂತರ ನಾವು ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲಿ ಆಕೆ ಮೃತಪಟ್ಟಿದ್ದಳು.

3. ಸಾಕ್ಷಿಗೆ ಎರಡು ದಾಖಲೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಗಳು ಮೃತಳ ಶವತನಿಖಾ ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ನೀಡಿದ್ದಾರೆ ಎಂದು ಹೇಳಲಾದ ನೋಟೀಸು

ಮತ್ತು ಶವತನಿಖಾ ಪಂಚನಾಮೆಯಾಗಿದ್ದು, ಸದರಿ ನೋಟೀಸು ಮತ್ತು ಶವತನಿಖಾ ಪಂಚನಾಮೆಯನ್ನು ಕ್ರಮವಾಗಿ ನಿಪಿ1 ಮತ್ತು ನಿಪಿ.2 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ), 2(ಎ) ಮತ್ತು 2(ಬಿ) ಎಂದು ಗುರುತಿಸಲಾಯಿತು.

4. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದರಲ್ಲಿ ಹೇಮಲತಾಳ ಮೃತ ದೇಹವಿದೆ ಎಂದು ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಇರುವ ಬೇರೆ ವ್ಯಕ್ತಿಗಳು ಯಾರು ಎಂದು ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ಮೃತ ಹೇಮಲತಾಳ ಶವವನ್ನು ನೋಡಲು ಪೊಲೀಸರು ನನಗೆ ಬಿಟ್ಟಿಲ್ಲ. ಆಕೆ ಹೊಟ್ಟೆ ನೋವಿನಿಂದಾಗಿ ಏನೋ ಕುಡಿದಿದ್ದಾಗಿ ತಿಳಿಯಿತು. ಅದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಮಾಹಿತಿ ನೀಡಿಲ್ಲ. ಪೊಲೀಸರು ನನಗೆ ಯಾವುದೇ ನೋಟೀಸನ್ನು ನೀಡಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಮಹಜರ್ ನ್ನು ಜರುಗಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

5. ದಿನಾಂಕ 04.06.2018 ರಂದು ಹಾಸನದ ಹಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಹೇಮಲತಾಳ ಶವ ತನಿಖಾ ಸಮಯದಲ್ಲಿ ಹಾಜರಿದ್ದು ಸಹಕರಿಸುವಂತೆ ಪೊಲೀಸರು ನನಗೆ ನಿಪಿ.1 ರಂತೆ

ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಖುದ್ದಾಗಿ ಆಕೆಯ ಶವವನ್ನು ನೋಡಲು ಅಲ್ಲಿಗೆ ಹೋಗಿದ್ದೆನು ಎನ್ನುತ್ತಾರೆ. ಸದರಿ ಶವಾಗಾರದಲ್ಲಿ ಸಂಜೆ 4.00 ಗಂಟೆಯಿಂದ 6.00 ಗಂಟೆಯವರೆಗೆ ನನ್ನ ಮತ್ತು ಸಹ ಪಂಚರಾದ ಚಾಸಾ.3 ಮತ್ತು 5 ರವರ ಸಮಕ್ಷಮ ನಿಪಿ.2 ರಂತೆ ಪೊಲೀಸರು ಶವತನಿಖಾ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಶವತನಿಖಾ ಸಮಯದಲ್ಲಿ ಆರೋಪಿಯು ತನ್ನ ಹೆಂಡತಿಯಾದ ಹೇಮಲತಾಳಿಗೆ ವಿನಾಃ ಕಾರಣ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡುತ್ತಿದ್ದ ಬಗ್ಗೆ ಹಾಗೂ ಆಕೆ ಯಾವುದಾದರೂ ವಿಷವನ್ನು ಕುಡಿದು ಸತ್ತರೆ ಆತ ನೆಮ್ಮದಿಯಾಗಿರುವುದಾಗಿ ಆಕೆಯನ್ನು ಕುರಿತು ಬೈಯ್ಯುತ್ತಿದ್ದಾಗಿ ಆ ರೀತಿ ಆರೋಪಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೇ ದಿನಾಂಕ 07.05.2018 ರಂದು ಆರೋಪಿ ತನ್ನ ಅಜ್ಜಿಯ ತಿಥಿಗೆ ಹೋದ ಸಮಯದಲ್ಲಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಹೇಮಾಲತಾಳು ಮನೆಯಲ್ಲಿದ್ದ ಇಲಿ ಪಾಷಾಣವನ್ನು ಸೇವಿಸಿ ರಾತ್ರಿಯವರೆಗೂ ಆ ವಿಚಾರವನ್ನು ಯಾರಿಗೂ ತಿಳಿಸದೇ ರಾತ್ರಿ ಆರೋಪಿ ತಿಥಿ ಕಾರ್ಯಕ್ರಮ ಮುಗಿಸಿ ಮನೆಗೆ ವಾಪಾಸ್ಸು ಹೋದಾಗ ಹೇಮಲತಾ ನರಳುತ್ತಿದ್ದುದನ್ನು ನೋಡಿ ಆತ ಆಕೆಯನ್ನು ಜೀಪಿನಲ್ಲಿ ಮೊದಲಿಗೆ ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ನಂತರ ಅಲ್ಲಿ ವೈಧ್ಯರು ಆಗುವುದಿಲ್ಲವೆಂದು ಹೇಳಿದ ಮೇರೆಗೆ ಆಕೆಯನ್ನು ಹೆಚ್ಚಿನ

ಚಿಕಿತ್ಸೆಗಾಗಿ ಹಾಸನದ ಮಂಗಳ ಆಸ್ಪತ್ರೆಗೆ ದಾಖಲು ಮಾಡಿದ್ದಾಗಿ ನಂತರ ಚಿಕಿತ್ಸೆ ಫಲಕಾರಿಯಾಗದೇ ಆಕೆ ದಿನಾಂಕ 03.06.2018 ರಂದು ರಾತ್ರಿ 11.45 ಗಂಟೆಗೆ ಮೃತಪಟ್ಟಿದ್ದಾಗಿ ಮತ್ತು ಆರೋಪಿ ನೀಡುತ್ತಿದ್ದ ಹಿಂಸೆಯನ್ನು ತಾಳಲಾರದೆ ಆಕೆ ಮತ್ತು ಆತ ಆಕೆಗೆ ಪ್ರಚೋದಿಸುತ್ತಿದ್ದುದರಿಂದ ಹೇಮಲತಾಳು ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ.

6. ಘಟನೆಯ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನು ನಿಮ್ಮ ಸಂಬಂಧಿಕನಾಗಿರುವ ಕಾರಣ ಆರೋಪಿಗೆ ಸಹಾಯ ಮಾಡಲು ಆರೋಪಿಯೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಜೆ ಕೆ ಎಸ್ ವಕೀಲರಿಂದ ಆರೋಪಿ ಪರವಾಗಿಃ</u>

7. ಹೇಮಲತಾ ಸಾಯುವ ಮೊದಲು ಆಕೆ ಮತ್ತು ಆರೋಪಿ ಅನ್ಯೂನ್ಯವಾಗಿದ್ದರು ಎಂದರೆ ಸರಿ. ಹೇಮಲತಾಳಿಗೆ ಆಗಾಗ್ಗೆ ಹೊಟ್ಟೆ ನೋವು ಬರುತ್ತಿತ್ತು ಎಂದರೆ ಸಾಕ್ಷಿ ಆಕೆ ಹೊಟ್ಟೆ ನೋವು ಎಂದು ಆಗಾಗ್ಗೆ ಕಾರಣ ಹೇಳುತ್ತಿದ್ದಳು ಎನ್ನುತ್ತಾರೆ. ಅದರಿಂದಾಗಿ ಆಕೆ ಮಾನಸಿಕವಾಗಿ ಕುಗ್ಗಿದ್ದಳು ಎಂದರೆ ಸರಿ. ಹೊಟ್ಟೆ ನೋವು ತಾಳಲಾರದೇ ಹೇಮಲತಾ 2-3 ಬಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಳು ಎಂದರೆ ಸಾಕ್ಷಿ ಆ ಬಗ್ಗೆ ಕೇಳಿದ್ದೇನೆ ನಾನು ನೋಡಿಲ್ಲ ಎನ್ನುತ್ತಾರೆ. ಆಕೆ ಹೊಟ್ಟೆ ನೋವು ತಾಳಲಾರದೇ

ಇಲಿ ಪಾಷಾಣ ಸೇವಿಸಿರುವುದಾಗಿ ಜನರು ಮಾತನಾಡಿಕೊಳ್ಳುತ್ತಿದ್ದರು ಎಂದರೆ ಇರಬಹುದು.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.